**ಸಾಕ್ಷಿಯನ್ನು ದಿಃ 12.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 3 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತದ ದಿನವೇ ಪೋಲೀಸರಿಗೆ ದೂರು ನೀಡಲು ತೊಂದರೆ ಇತ್ತಾ ಎಂದರೆ ಆ ದಿನ ನನಗೆ ಪೆಟ್ಟಾಗಿದ್ದ ಕಾರಣ ಕೊಡಲು ಆಗಲಿಲ್ಲ ಎನ್ನುತ್ತಾರೆ. ನನಗೆ ಪೆಟ್ಟಾಗಿದ್ದ ಬಗ್ಗೆ ನಾನು ಚಿಕಿತ್ಸ ಪಡೆದ ಬಗ್ಗೆ ದಾಖಲೆಗಳನ್ನು ನಾನು ಪೋಲೀಸರಿಗೆ ನೀಡಿಲ್ಲ. ನಾವು ಪ್ರಯಾಣಿಸುತ್ತಿದ್ದ ವಾಹನವನ್ನು ಯಾರು ತೆಗೆದುಕೊಂಡು ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆ ವಾಹನ ಯಾರಿಗೆ ಸೇರಿದ್ದು ನನಗೆ ಗೊತ್ತಿಲ್ಲ. ಆ ವಾಹನಕ್ಕೆ ಬಾಡಿಗೆ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಪ್ರಶ್ನಿತ ವಾಹನವನ್ನು ನಾವು ಬಾಡಿಗೆಗೆ ತೆಗೆದುಕೊಂಡು ಹೋಗುತ್ತಿದ್ದೇವು ಎಂದರೆ ನನಗೆ ಗೊತ್ತಿಲ್ಲ. ನನಗೆ ಗೊತ್ತಿದ್ದರೂ ಸಹ ಉದ್ದೇಶಪೂರ್ವಕವಾಗಿ ಗೊತ್ತಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಂಬಂಧಿಕರ ಸಾವಿಗೆ ಹೋಗುತ್ತಿದ್ದೇವು ಎನ್ನುತ್ತಾರೆ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.